ಚಿತ್ರರಂಗದಲ್ಲಿನ ಬಿಕ್ಕಟ್ಟಿಗೆ ಪರಿಹಾರ ಕಂಡುಕೊಳ್ಳುವ ರೂಪದಲ್ಲಿ ನಡೆದ ಪೂಜಾ ಕಾರ್ಯಕ್ರಮದ ಮುಂಚೂಣಿಯಲ್ಲಿದ್ದ ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್, 'ಜನ ಸಿನಿಮಾ ನೋಡುತ್ತಿಲ್ಲ. ಚಿತ್ರಮಂದಿರಗಳನ್ನು ಮುಚ್ಚಲಾಗುತ್ತಿದೆ. ಈ ಸಮಸ್ಯೆಗಳ ಪರಿಹಾರಕ್ಕೆ ಯಾರನ್ನು ಕೇಳಬೇಕು?' ಎಂದು ಪ್ರಶ್ನಿಸಿದ್ದಾರೆ. ಚಿತ್ರರಂಗದ ಸಂಕಷ್ಟಗಳ ಬಗ್ಗೆ ನೋವಿನಿಂದ ಮಾತನಾಡುವ ರಾಕ್‌ಲೈನ್, ಪ್ರೇಕ್ಷಕರ ವಿಶ್ವಾಸ ಕಳೆದುಕೊಳ್ಳುವ ಪರಿಸ್ಥಿತಿ ಸೃಷ್ಟಿಯಾಗಿರುವಲ್ಲಿ ಉದ್ಯಮದ ಪಾತ್ರವೇನು ಎನ್ನುವ ಪ್ರಶ್ನೆಯನ್ನು ಕೇಳಿಕೊಂಡಂತಿಲ್ಲ. 'ಯಾರ ಕೈಯಲ್ಲೂ ಈಗ ಏನೂ ಇಲ್ಲ. ದೇವರಲ್ಲದೆ ಬೇರೆ ಯಾರ ಮೊರೆ ಹೋಗಬೇಕು','ಕಲಾವಿದರಲ್ಲಿ ಒಗ್ಗಟ್ಟಿಲ್ಲ ಎಂಬುದು ಸುಳ್ಳು. ಒಗ್ಗಟ್ಟಿಲ್ಲದಿರುವುದು ಚಿತ್ರರಂಗದಲ್ಲಿ. ಎಲ್ಲ ಬರಬೇಕು, ಏನೋ ಮಾಡಬೇಕು ಎನ್ನುವುದೇನೋ ಸರಿ. ಆದರೆ, ಅದನ್ನು ಯಾರು ಮಾಡಬೇಕು?' – ರಾಕ್‌ಲೈನ್‌ರ ಈ ಪ್ರಶ್ನೆಗಳೇ ಉದ್ಯಮದಲ್ಲಿನ ವಿರೋಧಾಭಾಸಗಳನ್ನು ಸೂಚಿಸುವಂತಿದೆ. ಚಿತ್ರೋದ್ಯಮ ಸಮಸ್ಯೆಗಳಿಂದ ತತ್ತರಿಸುತ್ತಿದ್ದರೂ ಒಬ್ಬ ನಟನೂ ತನ್ನ ದಂತಗೋಪುರದಿಂದ ಇಳಿದುಬಂದು ಕಡಿಮೆ ಬಜೆಟ್‌ನ ಅರ್ಥಪೂರ್ಣ ಸಿನಿಮಾ ತಯಾರಿಸುವ ಮಾತುಗಳನ್ನಾಡುತ್ತಿಲ್ಲ.

## ಹೊಸಬರಿಗಿಲ್ಲ ಬಲ-ಬೆಂಬಲ

ಕನ್ನಡ ಸಿನಿಮಾಗಳ ಸೋಲಿನ ನಡುವೆಯೂ ಒಂದಷ್ಟು ಸಿನಿಮಾಗಳು ಭಿನ್ನ ಪ್ರಯತ್ನಗಳ ರೂಪದಲ್ಲಿ ಚಿತ್ರರಸಿಕರ ಗಮನಸೆಳೆದದ್ದನ್ನು ಗಮನಿಸಬೇಕು. ಆರ್ಥಿಕವಾಗಿ ಯಶಸ್ವಿ ಪ್ರಯೋಗಗಳಲ್ಲದೇ ಹೋದರೂ, ಹೊಸ ರುಚಿ ಹಾಗೂ ಅಭಿರುಚಿಯ ನಿಟ್ಟಿನಲ್ಲಿ ಇವು ಗಮನಾರ್ಹ ಪ್ರಯತ್ನಗಳಾಗಿದ್ದವು. ಈ ಪ್ರಯೋಗಗಳಲ್ಲಿ ಮುಖ್ಯ ವಾಹಿನಿ ಸಿನಿಮಾಗಳೂ ಇದ್ದವು; ಕಲಾತ್ಮಕ ಆಯಾಮಕ್ಕೆ ಹೆಚ್ಚು ಒತ್ತುಕೊಟ್ಟ ಪ್ರಯತ್ನಗಳೂ ಇದ್ದವು.



ರಮೇಶ್ ಇಂದಿರಾ: ಪೋಷಕ ಪಾತ್ರಗಳಿಗೆ ಹೊಸ ಹೊಳಪು

ವಿಶ್ವದ ಪ್ರತಿಷ್ಠಿತ ಚಿತ್ರೋತ್ಸವಗಳನ್ನು ಸುತ್ತಿಕೊಂಡು ಬಂದ ಜೈಶಂಕರ್ ನಿರ್ದೇಶನದ 'ಶಿವಮ್ಮ ಯರೆಹಂಚಿನಾಳ', ಪೃಥ್ವಿ ಕೊಣನೂರು ನಿರ್ದೇಶನದ 'ಹದಿನೇಳೆಂಟು' ಹಾಗೂ ಚಂಪಾ ಶೆಟ್ಟಿ ಅವರ 'ಕೋಳಿ ಎಸ್ರು' ಸಿನಿಮಾ ಮಾಧ್ಯಮದ ಬಗ್ಗೆ ಗೌರವ ಮೂಡಿಸುವ ಪ್ರಯತ್ನಗಳಾಗಿವೆ. ಪೃಥ್ವಿ ಅವರ 'ರೈಲ್ವೆ ಚಿಲ್ಡ್ರನ್' ಹಾಗೂ 'ಹದಿನೇಳೆಂಟು' ಸಿನಿಮಾಗಳನ್ನು ಈಗ ಯೂಟ್ಯೂಬ್ ಮೂಲಕ ನೋಡಬಹುದಾಗಿದೆ.

ಉತ್ಸವ್ ಗೊನ್ವಾರ್ ನಿರ್ದೇಶನದ 'ಫೋಟೊ' ಪ್ರೇಕ್ಷಕರ ಚಿತ್ತಭಿತ್ತಿಯಲ್ಲಿ ದೀರ್ಘ ಕಾಲ ಉಳಿಯುವ ಸಿನಿಮಾ. ಕೊರೊನಾ ಸಂದರ್ಭದಲ್ಲಿ ಜನಸಾಮಾನ್ಯರು ಅನುಭವಿಸಿದ ಸಂಕಟವನ್ನು ಬಹು ಪರಿಣಾಮಕಾರಿಯಾಗಿ ಚಿತ್ರಿಸಿದ 'ಫೋಟೊ', ಒಂದು ಕಲಾತ್ಮಕ ದಾಖಲೆಯಾಗಿ ಉಳಿಯಬಲ್ಲ ಸಿನಿಮಾ.

ರಘು ಶಾಸ್ತ್ರಿ ನಿರ್ದೇಶನದ 'ಲೈನ್‌ಮ್ಯಾನ್' ವ್ಯಾಪಾರಿ ಧಾಟಿಯಲ್ಲೇ ಹೃದಯಂಗಮ ಕಥನವೊಂದನ್ನು ನಿರೂಪಿಸುವ ಪ್ರಯತ್ನ. ಸಿಂಪಲ್ ಸುನಿ ನಿರ್ದೇಶನದಲ್ಲಿ ವಿನಯ್ ರಾಜ್‌ಕುಮಾರ್ ನಟಿಸಿರುವ 'ಒಂದು ಸರಳ ಪ್ರೇಮಕಥೆ' ಸರಳತೆಯನ್ನೇ ಗುಣವಾಗಿಸಿಕೊಂಡ ಸಿನಿಮಾ. ಶ್ರೀನಿಧಿ ಬೆಂಗಳೂರು ನಿರ್ದೇಶನದ 'ಬ್ಲಿಂಕ್' ಸೈನ್ಸ್ ಫಿಕ್ಷನ್ ಬಯಸುವ ಯುವ ಪ್ರೇಕ್ಷಕರನ್ನು ಸೆಳೆದ ಸಿನಿಮಾ. ಪರಮೇಶ್ವರ ಗುಂಡ್ಕಲ್ ಚೊಚ್ಚಿಲ ನಿರ್ದೇಶನದ ಹಾಗೂ ಧನಂಜಯ್ ನಟನೆಯ 'ಕೋಟಿ' ಸಾಕಷ್ಟು ಸುದ್ದಿ ಮಾಡಿದ ಸಿನಿಮಾ.

ಸಂದೀಪ್ ಸುಂಕದ್ ನಿರ್ದೇಶನದ 'ಶಾಖಾಹಾರಿ' ಹಾಗೂ ನವೀನ್ ನಾರಾಯಣಘಟ್ಟ ನಿರ್ದೇಶನದ 'ಮೂರನೇ ಕೃಷ್ಣಪ್ಪ', ಕಡಿಮೆ ಬಜೆಟ್‌ನಲ್ಲಿ ರೂಪುಗೊಂಡೂ ಗಮನಸೆಳೆದ ಸಿನಿಮಾಗಳು. ಈ ಎರಡೂ ಸಿನಿಮಾಗಳಲ್ಲಿ ರಂಗಾಯಣ ರಘು ಮುಖ್ಯ ಪಾತ್ರಗಳಲ್ಲಿ ನಟಿಸಿರುವುದು ವಿಶೇಷ. ಉತ್ತಮ ಕಥೆಯೊಂದನ್ನು ಆರಿಸಿಕೊಂಡು, ಕಡಿಮೆ ಬಜೆಟ್‌ನಲ್ಲಿ ಗಮನಾರ್ಹ ಚಿತ್ರವೊಂದನ್ನು ರೂಪಿಸುವ ಪ್ರಯತ್ನಗಳಾಗಿ ಗಮನಿಸಬಹುದಾದ ಚಿತ್ರಗಳಿವು.

ವಿಶ್ವದ ಗಮನಸೆಳೆಯುವಂಥ ಪ್ರಯೋಗಶೀಲ ಚಿತ್ರಗಳನ್ನು ಮಾಡುವ ಯುವ ನಿರ್ದೇಶಕರನ್ನು ಕನ್ನಡ ಚಿತ್ರರಂಗ ಗೌರವದಿಂದ ಕಾಣುವುದು



ಏನೆಲ್ಲ 'ಪೌಡರ್' ಗೆಲುವಿನ ಅಲಂಕಾರಕ್ಕಾಗಿ